ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/

**ಕಾರ್ಯದರ್ಶಿಯವರ ಕಛೇರಿ**
**ತಾಂತ್ರಿಕ ಪರೀಕ್ಷಾ ಮಂಡಳಿ**
**ಅರಮನೆ ರಸ್ತೆ, ಬೆಂಗಳೂರು-1**
**ದಿನಾಂಕ:31-10-2018**

ಸುತ್ತೋಲೆ

ವಿಷಯ: ರಾಜ್ಯದ 3 ಲೋಕಸಭಾ ಮತ್ತು 2 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಪ್ರಯುಕ್ತ ರಜೆ ಘೋಷಿಸಿರುವ ಕುರಿತು.

ಉಲ್ಲೇಖ:1)ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 46 ಹೆಚ್‌ಹೆಚ್‌ಎಲ್ 2018 ದಿ:30-10-2018
2) ಈ ಕಛೇರಿ ಸುತ್ತೋಲೆ ಸಂಖ್ಯೆ: :ಬಿಟಿಇ/03/ಇಸಿಎಸ್(1)/2018 ದಿ: 23-10-2018

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ 3 ಲೋಕಸಭಾ ಕ್ಷೇತ್ರಗಳಾದ ಬಳ್ಳಾರಿ, ಶಿವಮೊಗ್ಗ ಮತ್ತು ಮಂಡ್ಯ ಹಾಗೂ 2 ವಿಧಾನಸಭಾ ಕ್ಷೇತ್ರಗಳಾದ ಜಮಖಂಡಿ ಮತ್ತು ರಾಮನಗರ ಇಲ್ಲಿ ದಿನಾಂಕ:03-11-2018 ರಂದು ಉಪಚುನಾವಣೆಗಳು ಜರುಗಲಿವೆ. ಪ್ರಯುಕ್ತ ಉಲ್ಲೇಖ (1) ರ ಸರ್ಕಾರದ ಅಧಿಸೂಚನೆಯಲ್ಲಿ ಸದರಿ ಲೋಕಸಭಾ ಹಾಗೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಇರುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ **ದಿನಾಂಕ:03-11-2018** ರಂದು ರಜೆ ಘೋಷಿಸಲಾಗಿದೆ.

ತಾಂತ್ರಿಕ ಪರೀಕ್ಷಾ ಮಂಡಳಿಯ 2018 ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳು **ದಿನಾಂಕ: 02-11-2018** ರಿಂದ ಆರಂಭಗೊಳ್ಳುವುದರಿಂದ ಉಲ್ಲೇಖ(2)ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಉಪಚುನಾವಣೆಗಳು ಜರುಗುವ ಮೇಲ್ಕಂಡ **ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಿನ್ಸಿಪಾಲರುಗಳು, ಸದರಿ ಕ್ಷೇತ್ರಗಳ ಉಪಚುನಾವಣೆಗಳು ಮುಗಿದ ನಂತರ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಸೂಕ್ತ ದಿನಾಂಕವನ್ನು ನಿಗದಿಪಡಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಸೂಚಿಸಿದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.**

ಕಾರ್ಯದರ್ಶಿ

ಇವರಿಗೆ,
ಬಳ್ಳಾರಿ, ಶಿವಮೊಗ್ಗ, ಮಂಡ್ಯ, ಜಮಖಂಡಿ ಮತ್ತು ರಾಮನಗರ ವ್ಯಾಪ್ತಿಯ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ - ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಕಂಪ್ಯೂಟರ್ ವಿಭಾಗಕ್ಕೆ - ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ -ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ನಿರ್ದೇಶಕರ ಆಪ್ತ ಶಾಖೆ
4. ಕಾರ್ಯದರ್ಶಿಯವರ ಆಪ್ತಶಾಖೆ
5. ಕಡತಕ್ಕೆ.